ಮಲೆನಾಡು ಅಭಿವೃದ್ಧಿ ಕಾರ್ಯಕ್ರಮಕ್ಕೆ 1992-93ನೇ ಸಾಲಿನಲ್ಲಿ ಒದಗಿಸಲಾದ ಹಣ

1300 (1977): ಕೆ.ಸಿ. ಮೊಡ್ಗೇಕರ್ ದೇಸಾಯಿ (ಹಿರೇಬಾಗೇವಾಡಿ):-

ಮಾನ್ಯ ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಅಭಿವೃದ್ಧಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮಲೆನಾಡು ಅಭಿವೃದ್ಧಿ ಕಾರ್ಯಕ್ರಮಕ್ಕೆ ಪ್ರಸ್ತುತ ಸಾಲಿನಲ್ಲಿ ಅಂದರೆ 1992-93ನೇ ಸಾಲಿನ ಆಯವ್ಯಯದಲ್ಲಿ ಒದಗಿಸಲಾದ ಹಣ ಎಷ್ಟು;

ಆ. ಬೆಳಗಾಂ ಜಿಲ್ಲೆಗೆ ಎಷ್ಟು ಹಣ ತೆಗೆದಿಡಲಾಗಿದೆ ? (1. ಹಿರೇಬಾಗೇವಾಡಿ, 2. ಉಚ್ಚಗಾಂ ಮತ್ತು 3. ಖಾನಾಪುರ್ ಕ್ಷೇತ್ರಗಳಿಗೆ ಕ್ಷೇತ್ರವಾರು ಒದಗಿಸಿದ ಹಣದ ವಿವರ ನೀಡುವುದು);

ಇ) ಈ ಮೇಲೆ ಹೇಳಿದ ಕ್ಷೇತ್ರಗಳಲ್ಲಿ ತೆಗೆದುಕೊಂಡ ಕೆಲಸಗಳಿಗಾಗಿ ವಿವಿಧ ವಲಯಗಳಿಗೆ ಬಿಡುಗಡೆ ಮಾಡಿದ ಹಣ ?

ಶ್ರೀ ಎನ್. ಜೆ. ಹಾಲಪ್ಪ, ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ, ತಂತ್ರಜ್ಞಾನ ಮತ್ತು ಮಲೆನಾಡು ಅಭಿವೃದ್ಧಿ ರಾಜ್ಯಸಚಿವರು)

ಅ. 35.00 ಕೋಟಿ ರೂ.ಗಳು.

ಆ. ಮಂಡಳಿಯನ್ನು ಇತ್ತೀಚೆಗೆ ಅಂದರೆ ದಿನಾಂಕ 10.3.93 ರಂದು ರಚಿಸಿರುವುದರಿಂದ ಯಾವುದೇ ಹಣವನ್ನು ನಿಗದಿಪಡಿಸಿರುವುದಿಲ್ಲ.

ಇ. ಇಲ್ಲ.

ಹಿರೇಬಾಗೇವಾಡಿಯಲ್ಲಿ ಬಸ್‌ಸ್ಟ್ಯಾಂಡ್

1301 (1978): ಶ್ರೀ ಕೆ. ಸಿ. ಮೊಡೆಗೇಕರ್ ದೇಸಾಯಿ, (ಹಿರೇಬಾಗೇವಾಡಿ):-

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಳಗಾವಿ ತಾಲ್ಲೂಕಿನ ಹಿರೇಬಾಗೇವಾಡಿಯಲ್ಲಿ ಯೋಗ್ಯವಾದ ಬಸ್‌ನಿಲ್ದಾಣವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಆ. ಹಾಗಿದ್ದರೆ ಬಸ್ ನಿಲ್ದಾಣ ನಿರ್ಮಾಣಕ್ಕೆ ಕೈಕೊಂಡ ಕ್ರಮ ಮತ್ತು ಬಸ್‌ನಿಲ್ದಾಣಕ್ಕೆ ಮಂಜೂರಾದ ಹಣವೆಷ್ಟು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):-

ಅ. ಹೌದು.

ಆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಇನ್ನೂ ನಿವೇಶನವನ್ನು ಸ್ವಾಧೀನಕ್ಕೆ ಪಡೆದಿರುವುದಿಲ್ಲ. ನಿವೇಶನ ಸ್ವಾಧೀನಕ್ಕೆ ಪಡೆದ ನಂತರ ಬಸ್ ನಿಲ್ದಾಣ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು.